**ಕರ್ನಾಟಕ ಮುಕ್ತ ಶಾಲೆಗಳ ಪರೀಕ್ಷೆ, ಜೂನ್, 2015**

**Karnataka Open School Examination, June, 2015**

# ಸಮಾಜ ವಿಜ್ಞಾನ

# SOCIAL SCIENCE

**(ಹೊಸ ಪಠ್ಯಕ್ರಮ)**

**( New Syllabus )**

ದಿನಾಂಕ : 19. 06. 2015 ]

Date : 19. 06. 2015 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಪರಮಾವಧಿ ಅಂಕಗಳು : 100

Time : 2.00 P.M. to 5.00 P.M. ] [ Maximum Marks : 100

***ಸೂಚನೆಗಳು :*** i) ಉತ್ತರಗಳು ಪ್ರಶ್ನೆಗಳಿಗೆ ಸಮರ್ಪಕವಾಗಿರಲಿ.

ii) ಪ್ರಶ್ನೆ ಪತ್ರಿಕೆಗಳ ಮೇಲೆ ಉತ್ತರಗಳನ್ನು ಬರೆಯಬಾರದು.

iii) ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

I. ಈ ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿ : $8 \times 1 = 8$

1. ..........................ನ ಆಳ್ವಿಕೆಯಲ್ಲಿ ಅಥೆನ್ಸ್ ಸುವರ್ಣಯುಗವನ್ನು ಅನುಭವಿಸಿತು.

2. ಭಾರತದ ಹಿಮಾಲಯದಲ್ಲಿರುವ ಅತ್ಯಂತ ಎತ್ತರವಾದ ಶಿಖರವೆಂದರೆ .......................... .

3. ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ರಾಜ್ಯ .......................... .

4. ಸತಿ ಪದ್ಧತಿ ನಿಷೇಧ ಕಾನೂನು ಜಾರಿಗೆ ಬಂದ ವರ್ಷ .......................... .

5. ಸರ್ದಾರ್ ವಲ್ಲಭಭಾಯ್ ಪಟೇಲರು ರೈತರ ಸತ್ಯಾಗ್ರಹ ಚಳುವಳಿಯನ್ನು ..........................ಯಲ್ಲಿ ಸಂಘಟಿಸಿದರು.

6. ಗಾಳಿಯ ಶ್ರೇಷ್ಠತೆಯಲ್ಲಿ ಅಸಮಾನತೆ ಉಂಟಾಗುವುದನ್ನು .......................... ಎನ್ನುವರು.

7. ಪ್ರಧಾನಮಂತ್ರಿಯನ್ನು .......................... ನೇಮಿಸುತ್ತಾರೆ.

8. 'ಜನಿಸುತ್ತಾ ಮಾನವ ಸ್ವತಂತ್ರ, ಆದರೆ ಎಲ್ಲಾ ಕಡೆಯೂ ಅವನಿಗೆ ಕಡಿವಾಣಗಳೆ', ಎಂದು ಹೇಳಿದ ಫ್ರೆಂಚ್ ತತ್ತ್ವಜ್ಞಾನಿ .......................... .

II. ಈ ಕೆಳಗೆ ಕೊಟ್ಟಿರುವ ಮೊದಲ ಜೋಡಿಯ ಸಂಬಂಧವನ್ನು ಗ್ರಹಿಸಿ, ಎರಡನೆಯ ಜೋಡಿಯಲ್ಲಿ ಬಿಟ್ಟಿರುವ ಪದವನ್ನು ಬರೆಯಿರಿ : $3 \times 1 = 3$

9. ಕೇಂದ್ರ ಶಾಸಕಾಂಗ : ಸಂಪತ್ತು :: ರಾಜ್ಯ ಶಾಸಕಾಂಗ : ......................... .

10. ಸುಂದರ್‌ಬನ್ ಅರಣ್ಯ ಜೀವಿಧಾಮ : ಪಶ್ಚಿಮ ಬಂಗಾಳ :: ಬಂಡೀಪುರ ರಾಷ್ಟ್ರೀಯ ಉದ್ಯಾನವನ : ......................... .

11. ಕನಿಷ್ಕ : ಕುಶಾನ ಸಾಮ್ರಾಜ್ಯ :: ಅಶೋಕ : ......................... .

III. ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ : $4 \times 1 = 4$

12. ಮಂಗಳೂರು ಒಪ್ಪಂದ

13. ಸಾಲ್ಬಾಯ್ ಒಪ್ಪಂದ

14. ಶ್ರೀರಂಗಪಟ್ಟಣ ಒಪ್ಪಂದ

15. ಬೇಸ್ಸಿನ್ ಒಪ್ಪಂದ

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರಿಸಿ : $5 \times 1 = 5$

16. ಚೀನಾ ನಾಗರಿಕತೆ ಯಾವ ನದಿಗಳ ಕಣಿವೆಯಲ್ಲಿ ಬೆಳೆಯಿತು ?

17. ಭಾರತ ಅತ್ಯಂತ ದಕ್ಷಿಣದ ತುದಿ ಇಂದಿರಾ ಪಾಯಿಂಟ್ ಯಾವ ದ್ವೀಪದಲ್ಲಿದೆ ?

18. 'ದೇಶಬಂಧು' ಎಂದು ಯಾರನ್ನು ಕರೆಯಲಾಗುತ್ತಿತ್ತು ?

19. ಕೇಂದ್ರ ಶಾಸಕಾಂಗದ ಎರಡು ಸದನಗಳು ಯಾವುವು ?

20. ಇದುವರೆವಿಗೂ ಭಾರತದ ಸಂವಿಧಾನವನ್ನು ಎಷ್ಟು ಬಾರಿ ತಿದ್ದುಪಡಿ ಮಾಡಲಾಗಿದೆ ?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ***ಎರಡು*** ವಾಕ್ಯಗಳಲ್ಲಿ ಉತ್ತರಿಸಿ : $15 \times 2 = 30$

21. ಚತುರ್ವರ್ಣಾಶ್ರಮ ಜೀವನದ ನಾಲ್ಕು ಹಂತಗಳನ್ನು ಹೆಸರಿಸಿ.

22. ಪುನರುಜ್ಜೀವನ ಎಂದರೇನು ? ಆ ಕಾಲದ ಎರಡು ಕೃತಿಗಳನ್ನು ಹೆಸರಿಸಿ.

23. SAARC ನ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.

24. ಭಾರತದ ವಾಯುಗುಣದ ನಾಲ್ಕು ಋತುಗಳು ಮತ್ತು ಅವುಗಳ ಅವಧಿಯನ್ನು ತಿಳಿಸಿ.

25. ಭಾರತದಲ್ಲಿ ಕಂಡುಬರುವ ಪ್ರಮುಖ ಮಣ್ಣಿನ ಬಗೆಗಳನ್ನು ತಿಳಿಸಿ.

26. ಮಳೆನೀರಿನ ಕೊಯ್ಲು ಎಂದರೇನು ? ಅದರ ಎರಡು ವಿಧಗಳನ್ನು ತಿಳಿಸಿ.

27. ಜಾತಿಯ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಪಟ್ಟಿಮಾಡಿ.

28. 1857 ರ ಸಿಪಾಯಿದಂಗೆಯ ಕಾರಣಗಳನ್ನು ಹೆಸರಿಸಿ.

29. 1854 ರ ಚಾರ್ಲ್ಸ್ ವುಡ್ ವರದಿಯ ಮೂರು ಮುಖ್ಯ ಅಂಶಗಳನ್ನು ವಿವರಿಸಿ.

30. ಮುಸ್ಲಿಂ ಲೀಗ್‌ನ ಯಾವುದಾದರೂ ಎರಡು ಪ್ರಮುಖ ಉದ್ದೇಶಗಳನ್ನು ವಿವರಿಸಿ.

31. ಸಂವಿಧಾನವು ನಮಗೆ ನೀಡಿರುವ ಯಾವುದಾದರೂ ನಾಲ್ಕು ಮೂಲಭೂತ ಹಕ್ಕುಗಳನ್ನು ಹೆಸರಿಸಿ.

32. ಸ್ಥಳೀಯ ಸರ್ಕಾರ ಎಂದರೇನು ? ಅದರ ಎರಡು ವಿಧಗಳು ಯಾವುವು ?

33. ರಾಜ್ಯಸಭೆಯ ರಚನೆಯನ್ನು ಸಂಕ್ಷಿಪ್ತವಾಗಿ ತಿಳಿಸಿ.

34. ಪರಿಸರದ ಎರಡು ವಿಧಗಳು ಯಾವುವು ? ವಿವರಿಸಿ.

35. ನಿಶ್ಶಸ್ತ್ರೀಕರಣ ಎಂದರೇನು ?

VI. ಈ ಕೆಳಗಿನ ಪ್ರತಿಯೊಂದೂ ಪ್ರಶ್ನೆಗಳಿಗೂ ***ಐದು–ಆರು*** ವಾಕ್ಯಗಳಲ್ಲಿ ಉತ್ತರಿಸಿ : $10 \times 3 = 30$

36. ಭಾರತದ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

37. ಮಾನವ ಹಕ್ಕುಗಳ ಪ್ರಾಮುಖ್ಯತೆಯನ್ನು ವಿವರಿಸಿ.

38. ಹರಪ್ಪ ನಾಗರಿಕತೆಯ ಅವನತಿಗೆ ಕಾರಣವಾದ ಅಂಶಗಳನ್ನು ತಿಳಿಸಿ.

39. ಮಾನ್ಸೂನ್ ಎಂದರೇನು ? ಅದು ಭಾರತದ ವಾಯುಗುಣದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ?

40. ಗೋಧಿ ಬೆಳೆಗೆ ಬೇಕಾದ ಭೌಗೋಳಿಕ ಅಂಶಗಳನ್ನು ವಿವರಿಸಿ.

41. ರಸ್ತೆಗಳ ಪ್ರಾಮುಖ್ಯತೆಯನ್ನು ವಿವರಿಸಿ.

42. ಹೋಂರೂಲ್ ಲೀಗ್ ಸ್ಥಾಪಿಸಿದವರಾರು ? ಅದರ ಗುರಿಗಳು ಯಾವುವು ? ಅದರ ಕೇಂದ್ರಗಳನ್ನು ಹೆಸರಿಸಿ.

43. ಭಾರತವು ಯಾವ ಅಕ್ಷಾಂಶಗಳ ಮತ್ತು ರೇಖಾಂಶಗಳ ನಡುವೆ ವಿಸ್ತರಿಸಿದೆ ? ಹಾಗೂ ಭಾರತದ ನೆರೆಯ ರಾಷ್ಟ್ರಗಳನ್ನು ಹೆಸರಿಸಿ.

44. ಗ್ರಾಮ ಪಂಚಾಯಿತಿ ಸಮಿತಿಯ ಕಾರ್ಯಗಳನ್ನು ವಿವರಿಸಿ.

45. ಸಂವಿಧಾನದಲ್ಲಿ ಉಲ್ಲೇಖಿಸಿರುವ ಮೂಲಭೂತ ಕರ್ತವ್ಯಗಳನ್ನು ಪಟ್ಟಿಮಾಡಿ.

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಸುಮಾರು **ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $4 \times 4 = 16$

46. ಗ್ರಾಮ ಪಂಚಾಯಿತಿಯ ಕಾರ್ಯಗಳನ್ನು ವಿವರಿಸಿ.

47. ಎರಡನೇ ಮಹಾಯುದ್ಧದ ಪರಿಣಾಮಗಳನ್ನು ವಿವರಿಸಿ.

48. ಭಾರತದ ಸಕ್ಕರೆ ಕೈಗಾರಿಕೆಯ ಬಗ್ಗೆ ಸಂಕ್ಷಿಪ್ತವಾದ ಟಿಪ್ಪಣಿ ಬರೆಯಿರಿ.

49. ಭಾರತದ ಧಾರ್ಮಿಕ ಮತ್ತು ಶೈಕ್ಷಣಿಕ ಸುಧಾರಣೆಯಲ್ಲಿ ಬ್ರಹ್ಮ ಸಮಾಜದ ಪಾತ್ರವನ್ನು ವಿವರಿಸಿ.

VIII. 50. ಭಾರತದ ಒಂದು ಅಂದವಾದ ನಕ್ಷೆಯನ್ನು ಬರೆದು, ಈ ಕೆಳಗೆ ಸೂಚಿಸಿರುವ ಸ್ಥಳಗಳನ್ನು ಗುರಿತಿಸಿ : $1 + 3 = 4$

a) ಕಾವೇರಿ ನದಿ

b) ಕಾಂಡ್ಲಾ ಬಂದರು

c) ದೆಹಲಿ